O.S.169/2016
PW-2

**ಸಾಕ್ಷಿಯನ್ನು ದಿನಾಂಕ 25-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**
**ಪಾಟೀ ಸವಾಲುಃ- ಪ್ರತಿವಾದಿಗಳ ಪರ ಶ್ರೀ MCM ವಕೀಲರಿಂದಃ**

**1.** ವಾದಿಯು ಈ ದಾವೆಯನ್ನು ವಿಭಾಗಕ್ಕಾಗಿ **1** ನೇ ಪ್ರತಿವಾದಿ ಇತರೆ **3** ಜನರ ವಿರುದ್ಧ ಸಲ್ಲಿಸಿರುತ್ತಾರೆ. ನಾನು ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಮಾತ್ರ ಓದಲು ಮತ್ತು ಬರೆಯಲು ಬರುತ್ತದೆ. ದಾವಾ ಆಸ್ತಿಗಳು ಮೂಲತಃವಾಗಿ ಆವಲಪ್ಪರವರ ಕುಟುಂಬಕ್ಕೆ ಸೇರಿದ ಆಸ್ತಿಗಳಾಗಿರುತ್ತವೆ. ವಾದಿ ಮತ್ತು ಅವರ ಗಂಡ ಬೆಂಗಳೂರಿನಲ್ಲಿ **2** ವರ್ಷಗಳ ಕಾಲ ವಾಸ ಮಾಡಿದ್ದು, ಅವರು ಏನು ಕೆಲಸ ಮಾಡುತ್ತಿದ್ದರೆಂದು ನನಗೆ ಗೊತ್ತಿಲ್ಲ. ವಾದಿಯ ಗಂಡ ತೀರಿಕೊಂಡ ನಂತರ ವಾದಿಯು ಅವರ ಗಂಡನ ಮನೆಗೆ ಬಂದು ವಾಸ ಮಾಡುತ್ತಿದ್ದು, ಅಲ್ಲಿ ತೊಂದರೆ ಆದ ಕಾರಣ ವಾದಿಯು ಅವರ ತವರು ಮನೆಯಲ್ಲಿ ಸುಮಾರು **18** ವರ್ಷಗಳಿಂದ ವಾಸ ಮಾಡುತ್ತಿರುತ್ತಾರೆ.

**2.** ವಾದಿ ಮತ್ತು ರಾಮಕೃಷ್ಣಪ್ಪನ ಮದುವೆಯು ಗೋರವನಹಳ್ಳಿ ದೇವಸ್ಥಾನದಲ್ಲಿ ಜರುಗಿರುತ್ತದೆ. ವಾದಿಯ ತಾಯಿ ನನ್ನನ್ನು ಮದುವೆಗೆ ಕರೆದಿದ್ದು, ನಾನು ಮದುವೆಗೆ ಹೋಗಿರುತ್ತೇನೆ. ವಾದಿಯ ಮದುವೆಯ ಆಮಂತ್ರಣ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ರಾಮಕೃಷ್ಣಪ್ಪರವರು ಆವಲಪ್ಪ ಮತ್ತು ಲಕ್ಷ್ಮೀನರಸಮ್ಮರವರ **4** ನೇ ಮಗ ಎಂದು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆಂದರೆ ಸರಿ. ನಿಪಿ-**20** ವಾದಿಯ ತಂದೆ ತಾಯಿ ನನಗೆ ನೀಡಿದ ಆಮಂತ್ರಣ ಪತ್ರಿಕೆ ಆಗಿರುತ್ತದೆ. ನಿಪಿ-**20** ರಲ್ಲಿ ರಾಮಕೃಷ್ಣಪ್ಪರವರು ಆವಲಪ್ಪ ಮತ್ತು ಲಕ್ಷ್ಮೀನರಸಮ್ಮರವರ ದ್ವಿತೀಯ ಪುತ್ರ ಎಂದು ಮುದ್ರಣವಾಗಿರುತ್ತದೆ ಸರಿಯಲ್ಲ. ವಾದಿಯನ್ನು ರಾಮಕೃಷ್ಣಪ್ಪರವರು ವಿವಾಹ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಬೆಂಗಳೂರಿನಲ್ಲಿ ಗೃಹರಕ್ಷಕದಳದಲ್ಲಿ **Home Guard** ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ಗಂಡನ ಹೆಸರು ಶಿವಣ್ಣ ಎಂದರೆ ಸರಿಯಲ್ಲ. ವಾದಿಗೆ ಮನು ಎಂಬ ಮಗನಿರುತ್ತಾರನೆಂದರೆ ಸರಿಯಲ್ಲ. ಸದರಿ ಮನುರವರಿಗೆ ಅಪಘಾತವಾಗಿದ್ದು, ಸದರಿ ಅಪಘಾತದ ವಿಚಾರವಾಗಿ ವಾದಿಯು ಕೋಳಾಲ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಸದರಿ ದೂರಿನಲ್ಲಿ ವಾದಿಯ ಗಂಡನ ಹೆಸರು ಶಿವಣ್ಣ ಹಾಗೂ ಅವನ ಮಗನ ಹೆಸರು ಮನು ಎಸ್ ಎಂದು ಬರೆದಿರುತ್ತಾರೆಂದರೆ ಸರಿಯಲ್ಲ.

**3.** ವಾದಿಯ ಗಂಡ ರಾಮಕೃಷ್ಣ ರವರು ಸುಮಾರು **18-19** ವರ್ಷಗಳ ಹಿಂದೆ

ಮೃತಪಟ್ಟಿರುತ್ತಾರೆ. ಸದರಿ ರಾಮಕೃಷ್ಣಪ್ಪರವರು ಎಲ್ಲಿ ಯಾವ ರೀತಿ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಒಕ್ಕಲಿಗ ಜನಾಂಗಕ್ಕೆ ಸೇರಿದವನಾಗಿರುತ್ತೇನೆ. ನನಗೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಪ್ರತಿವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ ಹಾಗೂ ಯಾವ ಗ್ರಾಮಗಳಿಗೆ ಸೇರಿದ ಆಸ್ತಿಗಳಾಗಿವೆ ಎಂದು ನನ್ನಿಂದ ಹೇಳಲಾಗುವುದಿಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆಗಳು ಮೊದಲು ಯಾರ ಹೆಸರಿನಲ್ಲಿ ಬರುತ್ತಿದ್ದವು ಹಾಗೂ ಪ್ರಸ್ತುತ ಯಾರ ಹೆಸರಿನಲ್ಲಿ ಬರುತ್ತಿರುತ್ತವೆ ಎಂದು ನನ್ನಿಂದ ಹೇಳಲಾಗುವುದಿಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ರಾಮಕೃಷ್ಣಪ್ಪರವರ ತಂದೆ ತಾಯಿರವರ ಬಗ್ಗೆ ನನಗೆ ಗೊತ್ತು. ನಾನು ವಾದಿಯ ಗ್ರಾಮದಲ್ಲಿ ಮದುವೆ ಮಾಡಿಕೊಂಡಿರುತ್ತೇನೆ. ಗೊರವನಹಳ್ಳಿ ದೇವಸ್ಥಾನದಲ್ಲಿ ಯಾವುದೇ ಮದುವೆಗಳು ನಡೆಯುವುದಿಲ್ಲ ಎಂದರೆ ಸರಿಯಲ್ಲ. ಗೊರವನಹಳ್ಳಿ ದೇವಸ್ಥಾನದಲ್ಲಿ ವಾದಿ ಮತ್ತು ರಾಮಕೃಷ್ಣಪ್ಪರವರ ಮದುವೆ ನಡೆದಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದರೆ, ದೇವಸ್ಥಾನದ ಮುಂದೆ ವಾದಿ ಮತ್ತು ರಾಮಕೃಷ್ಣಪ್ಪರವರ ಮದುವೆ ಜರುಗಿರುತ್ತದೆ. ದೇವಸ್ಥಾನದಲ್ಲಿ ಮದುವೆ ಮಾಡುವುದಾದರೆ ಲಗ್ನಪತ್ರಿಕೆ ಮುದ್ರಣ ಮಾಡಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**20** ನ್ನು ವಾದಿಯು ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡು ಬಂದು ಹಾಜರುಪಡಿಸಿರುತ್ತಾರೆಂದರೆ ಸರಿಯಲ್ಲ. ವಾದಿಯ ಗಂಡನ ಹೆಸರು ಶಿವಣ್ಣ ಆಗಿದ್ದು, ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ವಾದಿಯು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ವಾದಿ ಹಾಗೂ ಪ್ರತಿವಾದಿಗಳ ಕುಟುಂಬ ಮತ್ತು ದಾವಾ ಆಸ್ತಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.169/2016
PW-2

Witness of the Plaintiff by name Vijay R present, filed affidavit in lieu of chief examination and examined as DW-**2.**

Sri. HVS prays time.

For cross of DW **2** by **07.04.2026.**

Civil Judge and JMFC.
*Koratagere.*